

## ‘ಸನ್ನಿ’ಸ್ಟಾರ್!

ಸನ್ನಿ ಎನ್ನುವ ಪದಕ್ಕೆ ಕನ್ನಡ ನಿಘಂಟು ಜ್ವರದ ತೀವ್ರತೆ ಮತ್ತು ಬುದ್ಧಿ ಭ್ರಮಣೆ ಎನ್ನುವ ಅರ್ಥಗಳನ್ನು ಸೂಚಿಸುತ್ತದೆ. ಪ್ರೇಮ್ ನಿರ್ದೇಶನ ಮತ್ತು ನಟನೆಯ ಸಿನಿಮಾಗಳನ್ನು ನೋಡಿದರೆ ಜ್ವರದ ತೀವ್ರತೆಯ ಅನುಭವ ಪ್ರೇಕ್ಷಕರಿಗೆ ಉಂಟಾಗುವುದು ಖಚಿತ. ಅಷ್ಟು ಮಾತ್ರವಲ್ಲ, ಕೆಲವೊಮ್ಮೆ ಅವರು ಜನರ ಬುದ್ಧಿಯೊಂದಿಗೆ ಆಟವಾಡುವ ಕೆಲಸವನ್ನೂ ಸಿನಿಮಾ ಮೂಲಕ ಮಾಡಿದ್ದಾರೆ. ಹಾಗಾಗಿ, ‘ಸನ್ನಿ’ ಎನ್ನುವ ವಿಶೇಷಣ ಪ್ರೇಮ್ ಅವರಿಗೆ ಹೊಂದುವಂತಹದ್ದು. ಅಭಿಮಾನಿಗಳು ಅವರನ್ನು ‘ಸನ್ನಿಸ್ಟಾರ್’ ಎಂದು ಪ್ರೇಮದಿಂದ ಕರೆಯಬಹುದು. ಈಗ ಈ ಸನ್ನಿ ಮತ್ತಷ್ಟು ತೀವ್ರವಾದಂತಿದ್ದು, ನಟಿ ಸನ್ನಿ ಲಿಯೋನ್‌ವರೆಗೆ ತಲುಪಿದೆ.

‘ಡಿಕೆ’ ಪ್ರೇಮ್ ನಟಿಸುತ್ತಿರುವ ಹೊಸ ಚಿತ್ರದ ಹೆಸರು. ಈ ಚಿತ್ರದ ಐಟಂ ಹಾಡೊಂದರಲ್ಲಿ ಕುಣಿಯಲು ಸನ್ನಿ ಒಪ್ಪಿಕೊಂಡಿದ್ದಾರಂತೆ. ‘ಶೇಷಮ್ಮ ಶೇಷಮ್ಮ’ ಎಂದು ಶುರುವಾಗುವ ಈ ಗೀತೆ ಸಿನಿಮಾದ ಹೈಲೈಟ್‌ಗಳಲ್ಲಿ ಒಂದಾಗಲಿದೆ ಎನ್ನುವುದು ಅವರ ಲೆಕ್ಕಾಚಾರ. ಅಂದಹಾಗೆ, ಸಿನಿಮಾಕ್ಕಾಗಿ ಪ್ರೇಮ್ ಸಾಕಷ್ಟು ಕಸರತ್ತು ಮಾಡಿದ್ದಾರಂತೆ. ಹನ್ನೊಂದು ಕಿಲೋ ತೂಕ ಕಳೆದುಕೊಂಡಿರುವ ಅವರು ‘ಡಿಕೆ’ಯಲ್ಲಿ ಭಿನ್ನ ಗೆಟಪ್‌ನಲ್ಲಿ ಕಂಗೊಳಿಸುವರಂತೆ.

‘ಕಳ್ಳ ಮಳ್ಳ ಸುಳ್ಳ’, ‘ಆಟೊ ರಾಜ’ ಸಿನಿಮಾಗಳನ್ನು ನಿರ್ದೇಶಿಸಿದ ಉದಯ್ ಪ್ರಕಾಶ್ ‘ಡಿಕೆ’ ಚಿತ್ರದಲ್ಲಿ ತಮ್ಮ ಹೆಸರನ್ನು ವಿಜಯ್ ಎಂದು ಬದಲಿಸಿಕೊಂಡಿದ್ದಾರೆ. ಪ್ರೇಮ್ ಜೊತೆ ಸೇರಿಕೊಂಡು ಅವರು, ಸನ್ನಿಯನ್ನು ಕರೆತರುವ ಮೂಲಕ ಸಮೂಹಸನ್ನಿ ಉಂಟು ಮಾಡುವ ಲೆಕ್ಕಾಚಾರ ಹೊಂದಿದ್ದಾರೆ. ತಮ್ಮ ವ್ಯಕ್ತಿತ್ವದ ನೀಲಿಛಾಯೆಯನ್ನು ಬಾಲಿವುಡ್‌ನಲ್ಲಿ ಕಳೆದುಕೊಳ್ಳಲು ಪ್ರಯತ್ನಿಸುತ್ತಿರುವ ಸನ್ನಿ ಲಿಯೋನ್ ಈಗ ಕನ್ನಡ ಚಿತ್ರರಂಗವನ್ನೂ ಪ್ರವೇಶಿಸುತ್ತಿದ್ದಾರೆ. ಇದೇ ಪ್ರೇಮ್ ಈ ಮೊದಲು ಮಲ್ಲಿಕಾ ಶೆರಾವತ್‌ರನ್ನು ಕನ್ನಡಕ್ಕೆ ಕರೆ ತಂದಿದ್ದರು. ಈಗ ಸನ್ನಿಯ ಸರದಿ. ಇನ್ನೂ ಯಾರೆಲ್ಲ ಅವರ ಮನಸ್ಸಿನಲ್ಲಿ ಇರುವರೋ? ವಿಪರ್ಯಾಸ ನೋಡಿ, ಭಿನ್ನ ಕಥನಗಳು ಮತ್ತು ನಿರ್ದೇಶನದ ಮೂಲಕ ಗಮನ ಸೆಳೆಯಬೇಕಿದ್ದ ನಿರ್ದೇಶಕನೊಬ್ಬನ ಕ್ರಿಯಾಶೀಲತೆ ಗ್ಲಾಮರ್ ಗೊಂಬೆಗಳ ಐಟಂ ಹಿಂದೆ ಕರಗಿಹೋಗುತ್ತಿರುವಂತಿದೆ.

## ಕೆಂಡಸಂಪಿಗೆಯ ಹೊಸ ಖುತು!

ಕೆಂಡಸಂಪಿಗೆ ಎಂದು ಚಿತ್ರರಸಿಕರಿಂದ ಕರೆಸಿಕೊಂಡ ಸುಂದರಿ ಐಂದ್ರಿತಾ ರೇ ಎರಡು ವರ್ಷಗಳ ಹಿಂದಷ್ಟೇ ಕೈತುಂಬಾ ಅವಕಾಶಗಳನ್ನು ಹೊಂದಿದ್ದ ನಟಿ. ಇತ್ತೀಚೆಗೆ ಹೆಚ್ಚೂಕಡಿಮೆ ಸಿನಿಮಾ ಚಟುವಟಿಕೆಗಳಿಂದ ಕಣ್ಮರೆಯಾದಂತಿದ್ದ ಐಂದ್ರಿತಾ ಮತ್ತೆ ಗಾಂಧಿನಗರದಲ್ಲಿ ಸುದ್ದಿಯಲ್ಲಿದ್ದಾರೆ.

‘ನಿರುತ್ತರ’ ಐಂದ್ರಿತಾ ನಟಿಸುತ್ತಿರುವ ಹೊಸ ಚಿತ್ರದ ಹೆಸರು. ಗಿರೀಶ ಕಾಸರವಳ್ಳಿ ಅವರ ಪುತ್ರ ಅಪೂರ್ವ ಕಾಸರವಳ್ಳಿ ಚೊಚ್ಚಿಲ ನಿರ್ದೇಶನದ ಸಿನಿಮಾ ಈ ‘ನಿರುತ್ತರ’. ಕಥೆಗಾರ ವಿಕ್ರಂ ಹತ್ವಾರ್ ಅವರ ಕಥೆಯನ್ನು ಆಧರಿಸಿದ ಈ ಸಿನಿಮಾದಲ್ಲಿ ಐಂದ್ರಿತಾ ಅವರಿಗೆ ಸೊಗಸಾದ ಪಾತ್ರವಿದೆಯಂತೆ. ಈವರೆಗೆ ಐಂದ್ರಿತಾ ಗ್ಲಾಮರ್ ಗೊಂಬೆಯಾಗಿ ಕಾಣಿಸಿಕೊಂಡಿರುವುದೇ ಹೆಚ್ಚು. ಈಗ ಪ್ರಯೋಗಾತ್ಮಕ ಸಿನಿಮಾಗಳತ್ತ ಅವರು ಮನಸ್ಸು ಮಾಡಿದ್ದು, ‘ನಿರುತ್ತರ’ದ ಮೂಲಕ ಹೊಸಹುಟ್ಟು ಪಡೆಯುವ ನಿರೀಕ್ಷೆ ಅವರದು. ಭಾವನಾ ಹಾಗೂ ಕಿರಣ್ ಕೂಡ ಈ ಚಿತ್ರದ ಮುಖ್ಯಪಾತ್ರಗಳಲ್ಲಿದ್ದಾರೆ.

ಕನ್ನಡದ ‘ನಿರುತ್ತರ’ದ ಜೊತೆಗೆ ಬೆಂಗಾಲಿ ಚಿತ್ರವೊಂದರಲ್ಲೂ ಐಂದ್ರಿತಾ ನಟಿಸುತ್ತಿದ್ದಾರೆ. ಇದು ಸುದೀಪ್ ನಟನೆಯ ಕನ್ನಡ ಚಿತ್ರ ‘ವಿಷ್ಣುವರ್ಧನ’ದ ರೀಮೇಕ್. ಅಂದಹಾಗೆ, ಪಶ್ಚಿಮ ಬಂಗಾಳ ಐಂದ್ರಿತಾ ಅವರ ಹಿರಿಯರ ತವರು.

■ ರಘು

